**ಓ.ಎಸ್. ಸಂಖ್ಯೆಃ 88/2022**

**ಪಿ.ಡಬ್ಲ್ಯೂಃ 1**

ದಿನಾಂಕಃ 19.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಪ್ರತಿವಾದಿ ನಂ 1 ರಿಂದ 5 ಪರ ವಕೀಲರಿಂದ**

1. ನಾನು ಎಸ್ ಎಸ್ ಎಲ್ ಸಿ ವರೆಗೂ ವಿದ್ಯಾಭ್ಯಾಸ ಮಾಡಿದ್ದೇನೆ. ನಮ್ಮ ಹಾಗೂ ಪ್ರತಿವಾದಿ ನಡುವೆ ಲಿಖಿತವಾಗಿ ಕರಾರು ಆಗಿತ್ತು. ಸದರಿ ಕರಾರು ಇಂಗ್ಲೀಷ ನಲ್ಲಿ ಬರೆದಿರುತ್ತದೆ. ಅದರಲ್ಲಿ ಎನು ಬರೆದಿದೆ ಗೊತ್ತಿಲ್ಲ. ಸದರಿ ಕರಾರು ಪತ್ರ ಪ್ರತಿವಾದಿ ಕಂಪನಿ ಬಳಿ ಇರುತ್ತದೆ. ಸರ್ವೆ ನಂ 318 ಬಿ1 ಎ, 318 ಬಿ1 ಬಿ, 154 ಎ, 155 ಎ, 156 ಎ ಜಮೀನುಗಳು ನನ್ನ ತಂದೆಗೆ ಸೇರಿದ್ದು. ಸರ್ವೆ ನಂ 2 ವೆಂಕೊಬ್ಬ ಎನ್ನುವವರಿಗೆ ಸೇರಿದ್ದು. ಸದರಿ ಜಮೀನನ್ನು ನಾವು ಬೋಗ್ಯದ ಆಧಾರದ ಮೇಲೆ ಸಾಗುವಳಿ ಮಾಡುತ್ತಿದ್ದೆವು. ಸದರಿ ದಾಖಲೆ ಇರುತ್ತದೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

2. 2012-13 ನೇ ಸಾಲಿನಲ್ಲಿ ನಾನು ಎಷ್ಟು ಕಬ್ಬನ್ನು ಪ್ರತಿವಾದಿಗಳಿಗೆ ಸರಬರಾಜು ಮಾಡಿದ್ದೆ ಎಂದು ನೆನಪಿಲ್ಲ. ಎಷ್ಟು ಹಣವನ್ನು ನಾನು ಪಡೆದಿದ್ದೆನೆ ಎಂದು ನೆನಪಿಲ್ಲ. 2013-14 ನೇ ಸಾಲಿನಲ್ಲಿ ನಾನು ಎಷ್ಟು ಕಬ್ಬನ್ನು ಪ್ರತಿವಾದಿಗಳಿಗೆ ಸರಬರಾಜು ಮಾಡಿದ್ದೆ ಎಂದು ನೆನಪಿಲ್ಲ. ಸದರಿ ಸಾಲಿನಲ್ಲಿ ನಾನು 14 ಲಕ್ಷ ಹಣ ಪಡೆದಿದ್ದೆನೆ. 2,17,657/- ಹಣ ಬಾಕಿ ಇರುತ್ತದೆ. ನಾನು ಕಬ್ಬನ್ನು ಟ್ರಾಕ್ಟರನಲ್ಲಿ ಸರಬರಾಜು ಮಾಡಿದ್ದೆ. ಅದರಲ್ಲಿ ಒಂದು ಟ್ರಾಕ್ಟರ ನನಗೆ ಸೇರಿದ್ದು, ಉಳಿದ ಟ್ರಾಕ್ಟರಗಳನ್ನು ಬಾಡಿಗೆ ಪಡೆದಿದ್ದೆ. ಸದರಿ ಟ್ರಾಕ್ಟರ ನ ನಂಬರ ಹೇಳಲು ಆಗುವುದಿಲ್ಲ. ಟ್ರಾಕ್ಟರಗಳ ಮಾಲೀಕರ ಹೆಸರು ಶಿವಪ್ಪ ಮತ್ತು ದೇವೆಂದ್ರ ಅಂತಾ ಇರುತ್ತದೆ. ಪ್ರತಿವಾದಿ ಶುಗರ್ ಪ್ಯಾಕ್ಟರಿಯಿಂದ ಪರ್ಮಿಟ್ ಕೊಡುವಾಗ ಅವರ ಕಡೆಯ ಅಧಿಕಾರಿಗಳು ಬಂದು ಕಬ್ಬನ್ನು ನೋಡಿ ಅದಕ್ಕೆ ಅನುಗುಣವಾಗಿ ಪರ್ಮಿಟ್ ಕೊಡುತ್ತಿದ್ದರು. ಟ್ರಾಕ್ಟರ ನಲ್ಲಿ ಲೋಡು ತೆಗೆದುಕೊಂಡು ಹೋದಾಗ ಪ್ಯಾಕ್ಟರ್ ನಲ್ಲಿ ಇರುವ ಬೇರೆ ಟ್ರಾಕ್ಟರಗಳ ಮೇಲೆ ನಾವು ಅನ್ಲೋಡ್ ಮಾಡಿ ಬರುವ ಸಮಯ ಅವಲಂಬಿತವಾಗಿರುತ್ತದೆ. ಕಬ್ಬು ಸರಬರಾಜು ಮಾಡುತ್ತಿದ್ದ ಟ್ರಾಕ್ಟರಗಳಿಗೆ ಒಂದು ಟ್ರೇಲರ್ ಇರುತ್ತಿತ್ತು.

3. ಕಬ್ಬನ್ನು ಪ್ರತಿವಾದಿ ಫ್ಯಾಕ್ಟರಿ ಇರುವ ಸ್ಥಳದಲ್ಲಿ ತೂಕ ಮಾಡುತ್ತಿದ್ದರು. ನಾನು ಬೇರೆ ಕಡೆ ತೂಕ ಮಾಡಿಸುತ್ತಿರಲಿಲ್ಲ. ನಾನು 13 ಲೋಡಿನ ಹಣವನ್ನು ಪಾವತಿ ಮಾಡಬೇಕೆಂದು ಪ್ರತಿವಾದಿಗಳ ವಿರುದ್ಧ ಈ ದಾವೆ ಸಲ್ಲಿಸಿದ್ದೆನೆ. ನನ್ನ ವಾದ ಪತ್ರದಲ್ಲಿ ಬಾಕಿ ಉಳಿದಿರುವ ಬಿಲ್ ಗಳ ವಿವರವನ್ನು ಕಂಡಿಕೆ 6 ರಲ್ಲಿ ನೀಡಿರುತ್ತೇನೆ. ಅದರ ಹೊರತಾಗಿ ನಾನು ಹೆಚ್ಚು ಕಬ್ಬನ್ನು ಪ್ರತಿವಾದಿಯರಿಗೆ ಸರಬರಾಜು ಮಾಡಿದ್ದೆ. ನನ್ನ ವಾದ ಪತ್ರದಲ್ಲಿ ನೀಡಿರುವ 13 ಲೋಡಿನ ವಿವರದಂತೆ ಮಾತ್ರ ನಾನು ಕಬ್ಬನ್ನು ಸರಬರಾಜು ಮಾಡಿದ್ದೆನೆ ಎಂದು ಬರೆಯಿಸಿರುವುದು ಸರಿ ಇರುವುದಿಲ್ಲ. ಸದರಿ ಲೋಡ್‌ಗಳ ವಿವರದಲ್ಲಿ ನಾನು ಟ್ರಾಕ್ಟರ ನಂಬರನ್ನು ಬರೆದಿರುವುದಿಲ್ಲ, ಕಾರಣ ಅವುಗಳು ವೇ ಬ್ರಿಡ್ಜ ರಶೀದಿಯಲ್ಲಿ ಇರುತ್ತದೆ.

4. ಕಬ್ಬು ಸರಬರಾಜು ಮಾಡಲು ಕಾರ್ಮಿಕರನ್ನು ನಾನೇ ನೇಮಕ ಮಾಡಿಕೊಂಡಿದ್ದೆ. ಕಾರ್ಮಿಕರು ಬೆಳೆಯನ್ನು ಕಟಾವು ಮಾಡಿದಾಗ ಕಡಿಮೆ ಲೋಡ್ ಇರುತ್ತದೆ ಹಾಗೂ ಮಷಿನ್ ಕಟಾವು ಮಾಡಿದಾಗ ಹೆಚ್ಚು ಲೋಡ್ ಇರುತ್ತದೆ ಎಂಬ ಸೂಚನೆಗೆ ಸಾಕ್ಷಿಯು ಅದು ಕಾರ್ಮಿಕರ ಸಂಖ್ಯೆಯ ಮೇಲೆ ಅವಲಂಬಿತವಾಗಿರುತ್ತದೆ ಎಂದು ನುಡಿಯುತ್ತಾರೆ. ಕಬ್ಬನ್ನು ಸರಬರಾಜು ಮಾಡುವಾಗ ಟ್ರಾಕ್ಟರ ಅಥವಾ ಲಾರಿ ಅಥವಾ ಬಂಡಿಯನ್ನು ಬಳಸಬಹದು ಎಂದರೆ ಸರಿ. ಕಬ್ಬನ್ನು ದ್ವಿಚಕ್ರ ವಾಹನ ಅಥವಾ ಆಟೋದಲ್ಲಿ ಸರಬರಾಜು ಮಾಡಲು ಆಗುವುದಿಲ್ಲ ಎಂದರೆ ಸರಿ. ವಾಹನದ ವಿವರಗಳು ಆರ್ ಟಿ ಓ ಕಚೇರಿಯಲ್ಲಿ ಲಭ್ಯ ಇರುತ್ತವೆ ಎಂದರೆ ಸರಿ. ನಾನು ಟ್ರಾಕ್ಟರ ನಲ್ಲಿ ಕಬ್ಬನ್ನು ಸರಬರಾಜು ಮಾಡದೇ ಇರುವ ಕಾರಣಕ್ಕೆ ವಾದ ಪತ್ರದಲ್ಲಿ ವಾಹನದ ಸಂಖ್ಯೆಯನ್ನು ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ವೇ ಬ್ರಿಡ್ಜ ರಶೀದಿಯಲ್ಲಿ ವಾಹನ ಸಂಖ್ಯೆ ನಮೂದು ಇರುತ್ತದೆ.

5. 2013-14 ನೇ ಸಾಲಿನಲ್ಲಿ ನಾನು ಪ್ರತಿವಾದಿಗಳಿಗೆ 93 ಲೋಡ್ ಕಬ್ಬು ಸರಬರಾಜು ಮಾಡಿದ ಬಗ್ಗೆ ಅವರಲ್ಲಿ ನಮೂದು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಅದರಲ್ಲಿ ಪ್ರತಿವಾದಿಯರು 80 ಲೋಡ್ ಕಬ್ಬಿನ ಹಣವನ್ನು ನನಗೆ ಪಾವತಿ ಮಾಡಿದ್ದಾರೆ ಎಂದರೆ ನನಗೆ ಹೇಳಲು ಆಗುವುದಿಲ್ಲ. ಅದರ ಬಗ್ಗೆ ನಾನು ದಾಖಲೆಯನ್ನು ಪರಿಶೀಲನೆ ಮಾಡಬೇಕು. ಪ್ರತಿವಾದಿಯರು ಹಣವನ್ನು ಬ್ಯಾಂಕಿನ ಮೂಲಕವೇ ಪಾವತಿ ಮಾಡುತ್ತಿದ್ದರು ಎಂದರೆ ಸರಿ. ನನ್ನ ವಾದ ಪತ್ರದ ಕಂಡಿಕೆ 6 ರಲ್ಲಿನ ಕ್ರಮ ಸಂಖ್ಯೆ 1 ರಿಂದ 4

ರಲ್ಲಿ ನಮೂದಿಸಿದ ದಿನಗಳ ಕಬ್ಬಿನ ಸರಬರಾಜು ಮಾಡಿದ್ದಕ್ಕೆ ಪ್ರತಿವಾದಿಯರು ನನಗೆ ಹಣ ಪಾವತಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಕ್ರಮ ಸಂಖ್ಯೆ 5 ರಿಂದ 13 ರಲ್ಲಿನ ಹಣ ಪಾವತಿ ಆಗಿಲ್ಲ ಎಂದರೆ ಸರಿ. ಸದರಿ ಕ್ರಮ ಸಂಖ್ಯೆ 5 ರಿಂದ 13 ರಲ್ಲಿನ ಸರಬರಾಜು ವಿವರ ಸುಳ್ಳು ಇದ್ದ ಕಾರಣಕ್ಕೆ ಪ್ರತಿವಾದಿಯರು ಹಣ ಪಾವತಿ ಮಾಡಿಲ್ಲ ಎಂದರೆ ಸರಿಯಲ್ಲ. ಕ್ರಮ ಸಂಖ್ಯೆ 5 ರಿಂದ 13 ರಲ್ಲಿನ ಸರಬರಾಜು ವಿವರವನ್ನು ನಾನು ಹಾಗೂ ಪ್ರತಿವಾದಿ ಕಂಪನಿಯ ವೇ ಬ್ರಿಡ್ಜನಲ್ಲಿ ಕೆಲಸ ಮಾಡುವ ಕೆಲಸಗಾರರು ಸೇರಿ ಸೃಷ್ಟಿ ಮಾಡಿದ್ದೆವೆ ಎಂದರೆ ಸರಿಯಲ್ಲ. ಇದೇ ರೀತಿ ಮಲ್ಲೇಶಪ್ಪ ಎನ್ನುವವರು ಸಹ ಸುಳ್ಳು ವಿವರವನ್ನು ಸೃಷ್ಟಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

6. ಸುಳ್ಳು ಸರಬರಾಜು ವಿವರ ನಮೂದು ಆದ ಬಗ್ಗೆ ಪ್ರತಿವಾದಿಯರು ಒಬ್ಬ ತನಿಖೆ ಅಧಿಕಾರಿಯಿಂದ ತನಿಖೆ ಮಾಡಿಸಿದ್ದರು ಎಂದರೆ ಗೊತ್ತಿಲ್ಲ. ಸದರಿ ತನಿಖೆಯಲ್ಲಿ ಪ್ರತಿವಾದಿಯ ಕೆಲಸಗಾರರಾದ ಹೆಚ್ ಎಂ ವಿರೇಶ, ಶೇಷಾದ್ರಿ, ರಾಜಕುಮಾರ, ರಾಮಲಿಂಗಚಾರಿ ಹಾಗೂ ಗಾದಿಲಿಂಗಪ್ಪ ರವರ ವಿರುದ್ದ ತನಿಖೆ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ನನಗೆ ನೋಟಿಸ್ ನೀಡಿದ್ದರು ಎಂದರೆ ಸರಿಯಲ್ಲ. ನಾನು ಕಬ್ಬು ಸರಬರಾಜು ಮಾಡಿದ ಟ್ರಾಕ್ಟರನ ಮಾಲೀಕರಿಗೂ ಸಹ ನೋಟಿಸ್ ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ.

7. ನೀವು ವಾಹನ ಸಂಖ್ಯೆ ಕೆ ಎ 34 ಟಿ ಎ 0702 ರಲ್ಲಿ ಕಬ್ಬು ಸರಬರಾಜು ಮಾಡಿದಂತೆ ಪ್ರತಿವಾದಿಯ ವೇ ಬ್ರಿಡ್ಜ ದಾಖಲೆಯಲ್ಲಿ ನಮೂದು ಇರುತ್ತದೆ ಎಂದರೆ ಸಾಕ್ಷಿಯು ವೇ ಬ್ರಿಡ್ಜನ ಕೆಲಸಗಾರರು ತಪ್ಪು ನಮೂದು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಟ್ರಾಕ್ಟರನ ಮಾಲೀಕರಾದ ಮಾಲಿಂಗ ರವರು ತಾನು ಟ್ರಾಕ್ಟರ ನ್ನು ಬಾಡಿಗೆ ನೀಡಿಲ್ಲ ಮತ್ತು ಅದರಲ್ಲಿ ಕಬ್ಬನ್ನು ಸರಬರಾಜು ಮಾಡಿಲ್ಲ ಎಂದು ತನಿಖೆಯಲ್ಲಿ ಹೇಳಿಕೆ ನೀಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

8. ಅದೇ ರೀತಿ ನಾನು ವಾಹನ ಸಂಖ್ಯೆ ಕೆ ಎ 34 ಟಿ ಎ 2474 ರಲ್ಲಿ ಕಬ್ಬು ಸರಬರಾಜು ಮಾಡಿದಂತೆ ಪ್ರತಿವಾದಿಯ ವೇ ಬ್ರಿಡ್ಜ ದಾಖಲೆಯಲ್ಲಿ ನಮೂದು ಇರುತ್ತದೆ ಎಂದರೆ ಸಾಕ್ಷಿಯು ವೇ

ಬ್ರಿಡ್ಜನ ಕೆಲಸಗಾರರು ತಪ್ಪು ನಮೂದು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಟ್ರಾಕ್ಟರನ ಮಾಲೀಕರಾದ ಶಿವಕುಮಾರ ರವರು ತಾನು ಟ್ರಾಕ್ಟರ ನ್ನು ಬಾಡಿಗೆ ನೀಡಿಲ್ಲ ಮತ್ತು ಅದರಲ್ಲಿ ಕಬ್ಬನ್ನು ಸರಬರಾಜು ಮಾಡಿಲ್ಲ ಎಂದು ತನಿಖೆಯಲ್ಲಿ ಹೇಳಿಕೆ ನೀಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

9. ಅದೇ ರೀತಿ ವಾಹನ ಸಂಖ್ಯೆ ಕೆ ಎ 37 ಟಿ 621 ರಲ್ಲಿ ಕಬ್ಬು ಸರಬರಾಜು ಮಾಡಿದಂತೆ ಪ್ರತಿವಾದಿಯ ವೇ ಬ್ರಿಡ್ಜ ದಾಖಲೆಯಲ್ಲಿ ನಮೂದು ಇರುತ್ತದೆ ಎಂದರೆ ಸಾಕ್ಷಿಯು ವೇ ಬ್ರಿಡ್ಜನ ಕೆಲಸಗಾರರು ತಪ್ಪು ನಮೂದು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಟ್ರಾಕ್ಟರನ ಮಾಲೀಕರಾದ ಯಲ್ಲಪ್ಪ ರವರು ತಾನು ಟ್ರಾಕ್ಟರ ನ್ನು ಬಾಡಿಗೆ ನೀಡಿಲ್ಲ ಮತ್ತು ಅದರಲ್ಲಿ ಕಬ್ಬನ್ನು ಸರಬರಾಜು ಮಾಡಿಲ್ಲ ಎಂದು ತನಿಖೆಯಲ್ಲಿ ಹೇಳಿಕೆ ನೀಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

10. ನನಗೆ ಹಣ ಪಾವತಿ ಮಾಡದೆ ಪ್ರತಿವಾದಿಯರು ಮೋಸ ಮಾಡಿದ್ದಾರೆ ಎಂದು ನಾನು ಖಾಸಗಿ ದೂರು ಸಲ್ಲಿಸಿದ್ದೆ ಎಂದರೆ ಸರಿ. ಸದರಿ ದೂರು ವಜಾ ಆಗಿದೆ ಎಂದರೆ ಸರಿ. ನಂತರ ನಾನು ಈ ದಾವೆ ಸಲ್ಲಿಸಿರುತ್ತೇನೆ. ನನಗೆ ಪ್ರತಿವಾದಿಯರು ಹಣ ಪಾವತಿ ಮಾಡುವುದು ಬಾಕಿ ಇದೆ ಎಂದು ಏಪ್ರಿಲ್ 2014 ರಲ್ಲಿ ಗೊತ್ತಾಯಿತು. ಈ ದಾವೆಯನ್ನು ನಾನು 2022 ರಲ್ಲಿ ಸಲ್ಲಿಸಿದ್ದೇನೆ ಎಂದರೆ ಸರಿ. ನಾನು 8 ವರ್ಷದ ನಂತರ ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದೂ ತಾನು ಮೊದಲು ಖಾಸಗಿ ದೂರು ಸಲ್ಲಿಸಿದ್ದೆ ಎಂದು ನುಡಿಯುತ್ತಾರೆ. ನಮ್ಮ ಹಾಗೂ ಪ್ರತಿವಾದಿ ನಡುವೆ ಬಡ್ಡಿಗೆ ಸಂಬಂದಪಟ್ಟಂತೆ ಯಾವುದೇ ಲಿಖಿತ ಕರಾರು ಆಗಿರುವುದಿಲ್ಲ. ನಾನು ಹಣದ ಮೇಲೆ ಬಡ್ಡಿ ಕಟ್ಟುತ್ತಿದ್ದ ಕಾರಣ ಈ ದಾವೆಯಲ್ಲಿ ಹಣದ ಮೇಲೆ ಬಡ್ಡಿ ಕೇಳಿರುತ್ತೇನೆ.

11. ರೂ. 11,98,175 ಹಣದ ಬಗ್ಗೆ ಸುಳ್ಳು ವಿವರ ನಮೂದು ಇದ್ದು ಪ್ರತಿವಾದಿ ಫ್ಯಾಕ್ಟರಿಯವರು ಸದರಿ ಹಣವನ್ನು ಪಾವತಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯಿಂದ ನಾನು 14,15,832/- ಹಣವನ್ನು ಪಡೆದಿದ್ದೇನೆ ಎಂದರೆ ಸರಿ. ಸದರಿ ಹಣ ಡಿಸೆಂಬರ್ ವರೆಗೂ ಸರಬರಾಜು ಮಾಡಿದ ಕಬ್ಬಿಗೆ ಸಂಬಂದಪಟ್ಟದ್ದು ಆಗಿರುತ್ತದೆ. ನಾನು ಪ್ರತಿವಾದಿಯರ ವಿರುದ್ದ ಕೇಳಿರುವ ಹಣ

ವಸೂಲಾತಿ ಪರಿಹಾರವು ಕಾಲಪರಿಮಿತಿಯನ್ನು ಮೀರಿರುತ್ತದೆ ಎಂದರೆ ಸರಿಯಲ್ಲ. ಈ ದಾವೆ ಸಲ್ಲಿಸಲು ವ್ಯಾಜ್ಯ ಕಾರಣ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರು ನನಗೆ ಯಾವುದೇ ಹಣವನ್ನು ಪಾವತಿ ಮಾಡುವ ಬಾದ್ಯತೆ ಹೊಂದಿಲ್ಲ ಎಂದರೆ ಸರಿಯಲ್ಲ. ಸುಳ್ಳು ವಿವರದ ಆಧಾರದ ಮೇಲೆ ನಾನು ಸುಳ್ಳು ಹಣ ವಸೂಲಾತಿ ಕೇಳುತ್ತಿದ್ದೆನೆ ಎಂದರೆ ಸರಿಯಲ್ಲ. ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೇ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ</u>**

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ.ಹೇ.ಕೆ. ಸರಿ ಇದೆ.

**ಸಿವಿಲ್ ಮತ್ತು ಜೆ.ಎಮ್.ಎಫ್.ಸಿ.**
**ನ್ಯಾಯಾಧೀಶರು, ಸಿರುಗುಪ್ಪ**